KSSIDC ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ )
ನೊಂದಾಯಿತ : ಆಡಳಿತ ಕಛೇರಿ : ಕೈಗಾರಿಕಾ ವಸಾಹತು ರಾಜಾಜಿನಗರ, ಬೆಂಗಳೂರು-10
E-MAIL : kssidcsmg@yahoo.in ವೆಬ್ ಸೈಟ್: www.kssidc.kar.co.in

ಕೈವಃ ಶಿವಃ ಚಿಮ:ಹರಿಹರಪುರ : ಬೇಡಿಕೆ ಸಮೀಕ್ಷೆ : 2017

ವಿಭಾಗೀಯ ಕಚೇರಿ ಕೈಗಾರಿಕಾ ವಸಾಹತು,
ಸಾಗರ ರಸ್ತೆ, ಶಿವಮೊಗ್ಗ
ದೂರವಾಣಿ.08182-250607

ದಿನಾಂಕ :07.06.2017

## ಬೇಡಿಕೆ ಸಮೀಕ್ಷೆ ಪ್ರಕಟಣೆ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು, ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕು, ಹರಿಹರಪುರದಲ್ಲಿ ಹಂಚಿಕೆ ಪಡೆದಿರುವ 7-20 ಎಕರೆ ಜಮೀನಿನಲ್ಲಿ ಕೈಗಾರಿಕಾ ವಸಾಹತುವನ್ನು ಅಭಿವೃದ್ಧಿ ಪಡಿಸಿ ಸಣ್ಣ ಕೈಗಾರಿಕಾ ಉದ್ಯಮಿಗಳಿಗೆ ಕೈಗಾರಿಕಾ ನಿವೇಶನಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದೆ.

ಈ ಪ್ರದೇಶದಲ್ಲಿ ಕೈಗಾರಿಕಾ ವಸಾಹತು ಅಭಿವೃದ್ಧಿ ಪಡಿಸುವ ಮೂಲಕ ಕೈಗಾರಿಕಾ ನಿವೇಶನಗಳನ್ನು ಆಸಕ್ತಿಯುಳ್ಳ ಸಣ್ಣ ಕೈಗಾರಿಕಾ ಉದ್ಯಮಿದಾರರಿಗೆ ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ. ಕೈಗಾರಿಕಾ ನಿವೇಶನಗಳನ್ನು ಪಡೆಯಲು ಆಸಕ್ತಿಯುಳ್ಳ ಭಾವಿ ಕೈಗಾರಿಕೋದ್ಯಮಿಗಳು, ಬಿಳಿ ಹಾಳೆಯ ಮೇಲೆ ಲಿಖಿತ ರೂಪದಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿಯಲ್ಲಿ ಪೂರ್ಣ ವಿಳಾಸ ಉದ್ದೇಶಿತ ಯೋಜನೆಯ ವಿವರ ಹಾಗೂ ಯೋಜನೆಗೆ ಅಗತ್ಯವಿರುವ ಕೈಗಾರಿಕಾ ನಿವೇಶನದ ಅಳತೆಯ ವಿವರಗಳೊಂದಿಗೆ ಹಾಗೂ ಇ.ಎಂ.ಡಿ ರೂ.2,000/- ಗಳನ್ನು ಕೆ.ಎಸ್.ಎಸ್.ಐ.ಡಿ.ಸಿ. ಶಿವಮೊಗ್ಗ ಇವರಿಗೆ ಸಂದಾಯವಾಗುವಂತೆ ಡಿ.ಡಿ ಯನ್ನು ಸಲ್ಲಿಸಬೇಕಾಗಿರುತ್ತದೆ. ಈ ಇ.ಎಂ.ಡಿ ಮೊತ್ತವನ್ನು ಮುಂದೆ ನಿವೇಶನ ಹಂಚಿಕೆಯಾದಲ್ಲಿ ನಿವೇಶನ ಮೌಲ್ಯಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ನಿವೇಶನ ಹಂಚಿಕೆಯಾಗಿದಿದ್ದ ಪಕ್ಷದಲ್ಲಿ ಇ.ಎಂ.ಡಿ ಮೊತ್ತವನ್ನು ಹಿಂದಿರುಗಿಸಲಾಗುವುದು. ದಿನಾಂಕ:30.06.2017 ರೊಳಗೆ ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕೆ.ಎಸ್.ಎಸ್.ಐ.ಡಿ.ಸಿ. ಕೈಗಾರಿಕಾ ವಸಾಹತು, ಸಾಗರ ರಸ್ತೆ, ಶಿವಮೊಗ್ಗ, ಇವರಿಗೆ ಸಲ್ಲಿಸಬೇಕಾಗಿರುತ್ತದೆ. ಈ ಪ್ರಕಟಣೆಯು ಕೈಗಾರಿಕಾ ನಿವೇಶನ ಬೇಡಿಕೆ ಸಮೀಕ್ಷೆಗಾಗಿ ಮಾತ್ರ ಹೊರಡಿಸಲಾಗಿರುತ್ತದೆ. ಕೈಗಾರಿಕಾ ವಸಾಹತು ಅಭಿವೃದ್ಧಿ ನಂತರದಲ್ಲಿ ನಿವೇಶನಗಳ ಹಂಚಿಕೆಗಾಗಿ ಪ್ರಕಟಣೆ ನೀಡಲಾಗುವುದು ಪ್ರಕಟಣೆಗೆ ಎದುರಾಗಿ ನಿಗಮದ ಹಂಚಿಕೆ ನಿಯಮಾವಳಿಗಳಂತೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಶಿವಮೊಗ್ಗ ಕಚೇರಿ ದೂರವಾಣಿ ಸಂಖ್ಯೆ. 08182-250607 ನ್ನು ಸಂಪರ್ಕಿಸಬಹುದಾಗಿದೆ. ಹಾಗೂ. Website:kssidc.co.in ವೀಕ್ಷಿಸಬಹುದಾಗಿದೆ ಇ-ಮೇಲ್ : :agmshg.kssidc@karnataka.gov.in

ತಮ್ಮ ವಿಶ್ವಾಸಿ
: ಸಹಿ :
ಸಹಾಯಕ ಪ್ರಧಾನ ವ್ಯವಸ್ಥಾಪಕರು-ಠಿ
ಶಿವಮೊಗ್ಗ ವಿಭಾಗ, ಶಿವಮೊಗ್ಗ